ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ :ಬಿಟಿಇ/01/ಇಸಿಎಸ್(2)/2019-20

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳ
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ:11-07-2019

## ಸುತ್ತೋಲೆ

ವಿಷಯ: 2019 ರ ಏಪ್ರಿಲ್/ಮೇ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಯ ಮೌಲ್ಯಮಾಪನವಾದ ಥಿಯರಿ ವಿಷಯಗಳ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನ ಕಾರ್ಯಕ್ಕೆ ಉಪನ್ಯಾಸಕರನ್ನು ನಿಯೋಜಿಸುವ ಬಗ್ಗೆ

ಉಲ್ಲೇಖ: 1. ನಿರ್ದೇಶಕರ ಜ್ಞಾಪನ ಸಂ: :ಬಿಟಿಇ/01/ಇಸಿಎಸ್(2)/2019-20 09-07-2019
2. ಸರ್ಕಾರಿ ಆದೇಶ ಸಂ:ಇಡಿ/57/ಟಿಪಿಇ/2013 ಬೆಂಗಳೂರು ದಿ: 17-04-2015

* * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2019 ರ ಏಪ್ರಿಲ್/ಮೇ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಯ ಥಿಯರಿ ಪಠ್ಯ ವಿಷಯಗಳ ಮೌಲ್ಯಮಾಪನವಾದ ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನ ಕಾರ್ಯವನ್ನು **ದಿನಾಂಕ:17-07-2019 ರಿಂದ 19-07-2019 ರವರೆಗೆ ಎಂ.ಇ.ಐ. ಪಾಲಿಟೆಕ್ನಿಕ್, ರಾಜಾಜಿನಗರ, ಬೆಂಗಳೂರು** ಇಲ್ಲಿ ನಡೆಸಲು ಕ್ರಮಕೈಗೊಳ್ಳಲಾಗಿದೆ ಹಾಗೂ ಕೆಳಕಂಡ ಬೋರ್ಡ್‌ವಾರು ವೇಳಾಪಟ್ಟಿಯಂತೆ ಮರುಮೌಲ್ಯಮಾಪನ ಕಾರ್ಯವನ್ನು ನಡೆಸಲು ನಿರ್ಧರಿಸಲಾಗಿದೆ. ಮರು ಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಲಾದ ಉಪನ್ಯಾಸಕರ ಪಟ್ಟಿಯನ್ನು ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್/ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಪಟ್ಟಿಯಲ್ಲಿ ನಮೂದಿಸಲಾಗಿರುವ ಉಪನ್ಯಾಸಕರನ್ನು ಕಡ್ಡಾಯವಾಗಿ ಮರುಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸುವಂತೆ ಸಂಬಂಧಪಟ್ಟ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ ಸೂಚಿಸಲಾಗಿದೆ. ಮರುಮೌಲ್ಯಮಾಪನ ಸಮಯದಲ್ಲಿ ಉಪನ್ಯಾಸಕರಿಗೆ ಯಾವುದೇ ರೀತಿಯ ರಜೆ ಮಂಜೂರು ಮಾಡಬಾರದೆಂದು ಸ್ಪಷ್ಟವಾಗಿ ತಿಳಿಸಲಾಗಿದೆ.

ಮರುಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಕರ್ತವ್ಯಲೋಪವೆಸಗುವ ಉಪನ್ಯಾಸಕರ ಮೇಲೆ ಉಲ್ಲೇಖಿತ ಸರ್ಕಾರಿ ಆದೇಶದ ಪ್ರಕಾರ ಕ್ರಮಕೈಗೊಳ್ಳಲಾಗುವುದು ಹಾಗೂ ಮರುಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಲ್ಪಟ್ಟ ಉಪನ್ಯಾಸಕರುಗಳು ಗೈರುಹಾಜರಾದರೆ, ಗೈರು ಹಾಜರಾದ ಅವಧಿಯ ವೇತನವನ್ನು ತಾಂತ್ರಿಕ ಪರೀಕ್ಷಾ ಮಂಡಳಿಯ 151ನೇ ಕೇಂದ್ರಿಯ ಸಭೆಯ ನಿರ್ಣಯ 151.3.5ರ ಅನ್ವಯ ಕಟಾಯಿಸಲಾಗುವುದು ಮತ್ತು ಮತ್ತು 171ನೇ ಕೇಂದ್ರೀಯ ಸಭೆಯ ನಿರ್ಣಯ 171.3.7(3) ಪ್ರಕಾರ ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ. ಮರುಮೌಲ್ಯಮಾಪನ ಕಾರ್ಯಕ್ಕೆ ಉಪನ್ಯಾಸಕರನ್ನು ಕಾರ್ಯ ವಿಮುಕ್ತಿಗೊಳಿಸದ ಪ್ರಿನ್ಸಿಪಾಲರುಗಳನ್ನು ಮುಂದಿನ ಆಗುಹೋಗುಗಳಿಗೆ ನೇರ ಹೊಣೆಗಾರರನ್ನಾಗಿಸಿ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಲಾಗಿದೆ.

| ಕ್ರ.ಸಂ. | ಮರು ಮೌಲ್ಯಮಾಪನ ಪ್ರಾರಂಭದ ದಿನಾಂಕ | ಬೋರ್ಡ್‌ನ ಹೆಸರು |
|---|---|---|
| 1 | 17-07-2019 | CE, CS, EC, ENG, EE, ME, SC, |
| 2 | 18-07-2019 | CP, AN, AT, MC, MN, MT, MTT, PT, ADFT, AR, LT, CH, CHEMISTRY, CN, CR, EI,PO, TX, EN, Kannada and all allied branches |

(ಸಹಿ) 11/07/19
ಕಾರ್ಯದರ್ಶಿ

ಇವರಿಗೆ:

ರಾಜ್ಯದಲ್ಲಿನ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಅಗತ್ಯ ಕ್ರಮಕ್ಕಾಗಿ

ಪ್ರತಿ: 1) ಇ-ಆಡಳಿತ ವಿಭಾಗಕ್ಕೆ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
2)ಕಂಪ್ಯೂಟರ್ ವಿಭಾಗ – ಮರುಮೌಲ್ಯಮಾಪಕರ ಪಟ್ಟಿಯನ್ನು ಬಿಟಿಇಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು
3) ಕಾರ್ಯದರ್ಶಿಯವರ ಆಪ್ತ ಶಾಖೆ 4) ಇಬಿಎಲ್ ವಿಭಾಗ

ಕರ್ನಾಟಕ ಸರ್ಕಾರ

<u>ತಾಂತ್ರಿಕ ಶಿಕ್ಷಣ ಇಲಾಖೆ</u>

ಸಂಖ್ಯೆ:ಬಿಟಿಇ/01/ಇಸಿಎಸ್(2)/2019-20

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ:11-07-2019

**<u>ಜ್ಞಾಪನ</u>**

ವಿಷಯ: 2019 ರ ಏಪ್ರಿಲ್/ಮೇ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗಳ ಥಿಯರಿ ವಿಷಯಗಳ ಮೌಲ್ಯಮಾಪನವಾದ ಉತ್ತರಪತ್ರಿಕೆಗಳ ಮರುಮೌಲ್ಯಮಾಪನ ಶಿಬಿರದ ಕುರಿತು.

ಉಲ್ಲೇಖ: ನಿರ್ದೇಶಕರ ಜ್ಞಾಪನ ಸಂ: :ಬಿಟಿಇ/01/ಇಸಿಎಸ್(2)/2019-20ದಿ:9-07-2019

* * * * * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2019 ರ ಏಪ್ರಿಲ್/ಮೇ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಯ ಥಿಯರಿ ಪಠ್ಯ ವಿಷಯಗಳ ಮೌಲ್ಯಮಾಪನವಾದ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನ ಕಾರ್ಯವನ್ನು <u>ದಿ: 17-07-2019</u> ರಿಂದ <u>19-07-2019</u> ರವರೆಗೆ ಎಂ.ಇ.ಐ. ಪಾಲಿಟೆಕ್ನಿಕ್, ರಾಜಾಜಿನಗರ, ಬೆಂಗಳೂರು ಇಲ್ಲಿ ನಡೆಸಲು ನಿರ್ಧರಿಸಲಾಗಿದೆ. ಶ್ರೀ ಸಿ.ಚಂದ್ರಶೇಖರ್ ಪ್ರಾಚಾರ್ಯರು, ಎಂ.ಇ.ಐ. ಪಾಲಿಟೆಕ್ನಿಕ್, ಬೆಂಗಳೂರು, ಇವರನ್ನು ಮರುಮೌಲ್ಯಮಾಪನ ಕೇಂದ್ರದ ಶಿಬಿರಾಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ಪ್ರಯುಕ್ತ ಮರುಮೌಲ್ಯಮಾಪನ ಕಾರ್ಯಕ್ಕೆ ಸಂಸ್ಥೆಯ ಬೋಧನಾ ತರಗತಿಗಳು, ಗಣಕ ಕೇಂದ್ರ ಮತ್ತು ಮರು ಮೌಲ್ಯಮಾಪನ ಸಮಯದಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳಾದ ಪೀಠೋಪಕರಣಗಳು, ನೀರು ಮತ್ತು ಶೌಚಾಲಯದ ಸಮರ್ಪಕ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ.

11/07/19

ಕಾರ್ಯದರ್ಶಿ

ಇವರಿಗೆ:
ಶ್ರೀ ಸಿ.ಚಂದ್ರಶೇಖರ್, ಪ್ರಿನ್ಸಿಪಾಲರು,
ಎಂ.ಇ.ಐ. ಪಾಲಿಟೆಕ್ನಿಕ್,
ಬೆಂಗಳೂರು - ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ

ಪ್ರತಿ:
1. ನಿರ್ದೇಶಕರ ಆಪ್ತಶಾಖೆ
2. ಕಾರ್ಯದರ್ಶಿಯವರ ಆಪ್ತ ಶಾಖೆ
3. ಇಎಪಿ ವಿಭಾಗ

ಕರ್ನಾಟಕ ಸರ್ಕಾರ

<u>ತಾಂತ್ರಿಕ ಶಿಕ್ಷಣ ಇಲಾಖೆ</u>

ಸಂಖ್ಯೆ:ಬಿಟಿಇ/01/ಇಸಿಎಸ್(2)/2019-20

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು -01,
ದಿನಾಂಕ: 11-07-2019

**ಜ್ಞಾಪನ**

ವಿಷಯ: 2019 ರ ಏಪ್ರಿಲ್/ಮೇ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗಳ ಥಿಯರಿ ವಿಷಯಗಳ ಮೌಲ್ಯಮಾಪನವಾದ ಉತ್ತರಪತ್ರಿಕೆಗಳ ಮರುಮೌಲ್ಯಮಾಪನ ಕಾರ್ಯಕ್ಕೆ ಪರೀಕ್ಷಕರ ಸಮಿತಿಯ ಅಧ್ಯಕ್ಷರು/ಸದಸ್ಯರು/ಸ್ಥಳೀಯ ಹಿರಿಯ ಉಪನ್ಯಾಸಕರುಗಳನ್ನು ಮರು ಮೌಲ್ಯಮಾಪನ ಶಿಬಿರದ ಮೇಲ್ವಿಚಾರಕರುಗಳನ್ನಾಗಿ ನಿಯೋಜಿಸಿರುವ ಕುರಿತು.

ಉಲ್ಲೇಖ:1.ನಿರ್ದೇಶಕರ ಜ್ಞಾಪನ ಸಂ:ಬಿಟಿಇ/01/ಇಸಿಎಸ್(2)/2019-20 ದಿ:09-07-2019.

************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2019 ರ ಏಪ್ರಿಲ್/ಮೇ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗಳ ಥಿಯರಿ ವಿಷಯಗಳ ಮೌಲ್ಯಮಾಪನವಾದ ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನ ಕಾರ್ಯವನ್ನು **<u>ದಿನಾಂಕ:17-07-2019 ರಿಂದ 19-07-2019 ರವರೆಗೆ</u>** ಎಂ.ಇ.ಐ. ಪಾಲಿಟೆಕ್ನಿಕ್, ರಾಜಾಜಿನಗರ, ಬೆಂಗಳೂರು ಇಲ್ಲಿ ನಡೆಸಲು ಕ್ರಮಕೈಗೊಳ್ಳಲಾಗಿದೆ. ಸದರಿ ಮರುಮೌಲ್ಯಮಾಪನ ಕಾರ್ಯವು ಸುಗಮವಾಗಿ ಜರುಗಲು ಈ ಕೆಳಗೆ ತಿಳಿಸಲಾದ ಪರೀಕ್ಷಕರ ಸಮಿತಿಯ ಅಧ್ಯಕ್ಷರು/ಸದಸ್ಯರು/ಸ್ಥಳೀಯ ಹಿರಿಯ ಉಪನ್ಯಾಸಕರುಗಳನ್ನು ಮರುಮೌಲ್ಯಮಾಪನ ಶಿಬಿರದ ಮೇಲ್ವಿಚಾರಕರುಗಳನ್ನಾಗಿ ನಿಯೋಜಿಸಲಾಗಿದೆ. ಪ್ರಯುಕ್ತ ಸದರಿ ಅಧ್ಯಕ್ಷರು/ಸದಸ್ಯರು/ಸ್ಥಳೀಯ ಹಿರಿಯ ಉಪನ್ಯಾಸಕರುಗಳು ದಿನಾಂಕ: **<u>ದಿ:17-07-2019</u>** ರಂದು ಬೆಳಗ್ಗೆ 9.00ಗಂಟೆಗೆ ಎಂ.ಇ.ಐ. ಪಾಲಿಟೆಕ್ನಿಕ್, ಬೆಂಗಳೂರು ಮರುಮೌಲ್ಯಮಾಪನ ಕೇಂದ್ರದಲ್ಲಿ ಕಾರ್ಯ ವರದಿ ಮಾಡಿಕೊಂಡು ಮರುಮೌಲ್ಯಮಾಪನ ಕಾರ್ಯವನ್ನು ಸುಗಮವಾಗಿ ಜರುಗಿಸುವಂತೆ ಆದೇಶಿಸಲಾಗಿದೆ.

| ಕ್ರ.ಸಂ. | ವಿಭಾಗ | ಅಧ್ಯಕ್ಷರು/ಸದಸ್ಯರು/ಹಿರಿಯ ಉಪನ್ಯಾಸಕರು |
|---|---|---|
| 1 | ಸಿ.ಪಿ | 1. ಚಂದ್ರಶೇಖರ್ ಹೆಚ್.ಎಸ್ ಆ.ಶ್ರೇ.ಉ. ಸರ್ಕಾರಿ ಪಾಲಿಟೆಕ್ನಿಕ್, ಜೋಯಿಡಾ<br>2. ರವೀಂದ್ರ ಟಿ.ಎಲ್ ಆ.ಶ್ರೇ.ಉ ಜಿ.ಆರ್.ಐ.ಸಿ.ಪಿ. ಬೆಂಗಳೂರು (ಕನ್ನಡ)<br>3. ಎಸ್.ಸಿ.ಬಿಳಕೇರಿ, ಉಪನ್ಯಾಸಕರು ಡಿ.ಆರ್.ಆರ್.(ಸ) ಪಾಲಿಟೆಕ್ನಿಕ್, ದಾವಣಗೆರೆ<br>4. ಕೃಷ್ಣಮೂರ್ತಿ. ಉಪನ್ಯಾಸಕರು ಸರ್ಕಾರಿ ಮಹಿಳಾ ವಸತಿ ಪಾಲಿಟೆಕ್ನಿಕ್, ಶಿವಮೊಗ್ಗ<br>5. ವೆಂಕಟೇಶ್.ಎಂ ಉಪನ್ಯಾಸಕರು ಜಿ.ಆರ್.ಐ.ಸಿ.ಪಿ. ಬೆಂಗಳೂರು<br>6. ನಿವೇದಿತಾ.ಹೆಚ್ ಉಪನ್ಯಾಸಕರು ಜಿ.ಆರ್.ಐ.ಸಿ.ಪಿ. ಬೆಂಗಳೂರು |
| 2 | ಇಂಗ್ಲೀಷ್ | 1. ಸೌಮ್ಯ ಎಂ.ಎನ್ ಉಪನ್ಯಾಸಕರು, ಎಸ್.ಜೆ.(ಸ) ಪಾಲಿಟೆಕ್ನಿಕ್, ಬೆಂಗಳೂರು<br>2. ಶೈಲಜಾ, ಉಪನ್ಯಾಸಕರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು |
| 3 | ಸಿವಿಲ್ | 1 ಎಂ.ಎಸ್.ನಟರಾಜ, ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್, ಬೇಲೂರು<br>2.ಎಲ್.ವಿ.ಗಿರೀಶ ಆ.ಶ್ರೇ.ಉ ಸರ್ಕಾರಿ ಪಾಲಿಟೆಕ್ನಿಕ್, ಹರಿಹರ<br>3.ಹೆಚ್.ಪಿ ಶಿವಸ್ವಾಮಿ ಆ.ಶ್ರೇ.ಉ. ಸಿ.ಪಿ.ಸಿ. ಸರ್ಕಾರಿ ಪಾಲಿಟೆಕ್ನಿಕ್, ಮೈಸೂರು<br>4.ದೇವರಸೇಗೌಡ, ಆ.ಶ್ರೇ.ಉ. ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು |
| 4 | ಎಲೆಕ್ಟ್ರಿಕಲ್ | 1. ನಸೀಮಾ ಬೇಗಂ, ಆ.ಶ್ರೇ.ಉ. ಸರ್ಕಾರಿ ಪಾಲಿಟೆಕ್ನಿಕ್, ಬಳ್ಳಾರಿ<br>2.ಎಸ್.ಚಂದ್ರಶೇಖರ, ಆ.ಶ್ರೇ.ಉ. ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು<br>3. ಹನುಮೇಶ್ ಆ.ಶ್ರೇ.ಉ. ಸರ್ಕಾರಿ ಪಾಲಿಟೆಕ್ನಿಕ್, ಕುಷ್ಟಗಿ<br>4. ಪ್ರಸನ್ನ ಹೆಚ್.ಆರ್ ಆ.ಶ್ರೇ.ಉ. ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ |
| 5 | ಮೆಕ್ಯಾನಿಕಲ್ | 1. ಎಂ.ಎಸ್.ದೇವರಾಜು, ಪ್ರಿನ್ಸಿಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಹರಪನಹಳ್ಳಿ<br>2. ವೈ.ಚನ್ನಬಸಪ್ಪ ಆ.ಶ್ರೇ.ಉ. ಸರ್ಕಾರಿ ಪಾಲಿಟೆಕ್ನಿಕ್, ರಾಯಚೂರು<br>3. ಎಂ.ಅಂಜನಿ ಆ.ಶ್ರೇ.ಉ. ಡಿ.ಆರ್.ಆರ್.(ಸ) ಪಾಲಿಟೆಕ್ನಿಕ್, ದಾವಣಗೆರೆ<br>4. ಪ್ರಭುಶಂಕರ ಡಿ.ಸಿ. ಆ.ಶ್ರೇ.ಉ. ~~ಡಿ.ಸಿ~~ ಸರ್ಕಾರಿ ಪಾಲಿಟೆಕ್ನಿಕ್, ಅರಕೆರೆ, ಶ್ರೀರಂಗಪಟ್ಟಣ<br>5. ರವಿಶಂಕರ್ ಆರ್.ಎಲ್ ಆ.ಶ್ರೇ.ಉ. ಬಾಪುಜಿ ಪಾಲಿಟೆಕ್ನಿಕ್, ದಾವಣಗೆರೆ |

| | | |
|---|---|---|
| 6 | ವಿಜ್ಞಾನ | 1. ಸಿ.ಎನ್.ರೇಣುಕಾದೇವಿ ಆ.ಶ್ರೇ.ಉ. ಡಿ.ಆರ್.ಆರ್.ಸರ್ಕಾರಿ ಪಾಲಿಟೆಕ್ನಿಕ್, ದಾವಣಗೆರೆ<br>2. ಬಸವರಾಜು ಜೋಗಿ ಆ.ಶ್ರೇ.ಉ. ಸರ್ಕಾರಿ ಪಾಲಿಟೆಕ್ನಿಕ್, ರಾಯಚೂರು<br>3. ರುದ್ರಸ್ವಾಮಿ ಆ.ಶ್ರೇ.ಉ. ಡಿ.ಎ.ಸಿ.ಜಿ ಸರ್ಕಾರಿ ಪಾಲಿಟೆಕ್ನಿಕ್, ಚಿಕ್ಕಮಗಳೂರು<br>4. ಸತ್ಯನಾರಾಯಣ ದೀಕ್ಷಿತ್ ಆ.ಶ್ರೇ.ಉ ಪಿ.ವಿ.ಪಿ.ಪಾಲಿಟೆಕ್ನಿಕ್, ಬೆಂಗಳೂರು |
| 7 | ಇ ಅಂಡ್ ಸಿ | 1. ಸುರೇಶ್‌ಬಾಬು.ಆರ್ ಆ.ಶ್ರೇ.ಉ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು<br>2. ಎಂ.ಬಸವರಾಜು ಆ.ಶ್ರೇ.ಉ. ಸಿ.ಪಿ.ಸಿ.ಸರ್ಕಾರಿ ಪಾಲಿಟೆಕ್ನಿಕ್, ಮೈಸೂರು |
| 8 | ಕಂಪ್ಯೂಟರ್ ಸೈನ್ಸ್ | 1. ಲೀಲಾವತಿ.ವಿ ಆ.ಶ್ರೇ.ಉ ಸರ್ಕಾರಿ ಪಾಲಿಟೆಕ್ನಿಕ್, ಬಾಗೇಪಲ್ಲಿ<br>2.ಬನಶಂಕರಮ್ಮ ಆ.ಶ್ರೇ.ಉ. ಸರ್ಕಾರಿ ಪಾಲಿಟೆಕ್ನಿಕ್, ಬಾಗಲಕೋಟೆ<br>3. ಶೇಖರ್.ಕೆ.ಎನ್ ಆ.ಶ್ರೇ.ಉ, ಸಿ.ಪಿ.ಸಿ.ಸರ್ಕಾರಿ ಪಾಲಿಟೆಕ್ನಿಕ್, ಮೈಸೂರು<br>4. ಸವಿತಾ ಎ.ಆರ್ ಆ.ಶ್ರೇ.ಉ, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ರಾಮನಗರ<br>5. ಮಂಜುಳಾ ಆ.ಶ್ರೇ.ಉ. ಪಿ.ವಿ.ಪಿ.ಪಾಲಿಟೆಕ್ನಿಕ್, ಬೆಂಗಳೂರು |
| 9 | ಆಟೋ | 1. ಗೋಪಿನಾಥ್.ಕೆ ಆ.ಶ್ರೇ.ಉ. ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ<br>2.ವೆಂಕಟೇಶ್ ಆ.ಶ್ರೇಉ. ಶ್ರೀಮತಿ ಎಲ್.ವಿ ಸರ್ಕಾರಿ ಪಾಲಿಟೆಕ್ನಿಕ್, ಹಾಸನ |

**ವಿಶೇಷ ಸೂಚನೆ.:** ಮೇಲ್ಕಂಡ ವಿವಿಧ ಪರೀಕ್ಷಕರ ಸಮಿತಿಯ ಅಧ್ಯಕ್ಷರು/ಸದಸ್ಯರು/ ಹಿರಿಯ ಉಪನ್ಯಾಸಕರುಗಳು **ದಿನಾಂಕ: ದಿ:17-07-2019 ರಂದು ಬೆಳಗ್ಗೆ 9.30 ಘಂಟೆಗೆ** ಪ್ರಾಚಾರ್ಯರು, ಎಂ.ಇ.ಐ ಪಾಲಿಟೆಕ್ನಿಕ್, ರಾಜಾಜಿನಗರ, ಬೆಂಗಳೂರು ಇವರ ಕೊಠಡಿಯಲ್ಲಿ ಕಾರ್ಯದರ್ಶಿಯವರು, ತಾಂತ್ರಿಕ ಪರೀಕ್ಷಾ ಮಂಡಳಿ ಇವರ ಅಧ್ಯಕ್ಷತೆಯಲ್ಲಿ ನಡೆಯುವ ಪೂರ್ವಭಾವಿ ಸಭೆಗೆ ಕಡ್ಡಾಯವಾಗಿ ಹಾಜರಾಗಲು ತಿಳಿಸಲಾಗಿದೆ.

11/07/19
ಕಾರ್ಯದರ್ಶಿ

ಇವರಿಗೆ,

ಮೇಲ್ಕಂಡ ಪರೀಕ್ಷಕರ ಸಮಿತಿಗಳ ಅಧ್ಯಕ್ಷರು/ಸದಸ್ಯರು/ಹಿರಿಯ ಉಪನ್ಯಾಸಕರುಗಳಿಗೆ – ಮುಂದಿನ ಕ್ರಮಕ್ಕಾಗಿ

ಪ್ರತಿ:

1.ಸಂಬಂಧಪಟ್ಟ ಪ್ರಾಚಾರ್ಯರುಗಳಿಗೆ – ಅಗತ್ಯಕ್ರಮಕ್ಕಾಗಿ

2. ಇ-ಆಡಳಿತ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು

3. ಗಣಕ ಕೇಂದ್ರ – ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು

4.ಕಾರ್ಯದರ್ಶಿಯವರ ಆಪ್ತಶಾಖೆ

ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/01/ಇಸಿಎಸ್(2)/2019-20

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-1
ದಿನಾಂಕ: 11-07-2019

ಸುತ್ತೋಲೆ

ವಿಷಯ: 2019 ರ ಏಪ್ರಿಲ್/ಮೇ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗಳ ಮೌಲ್ಯಮಾಪನವಾದ ಉತ್ತರಪತ್ರಿಕೆಗಳ ಮರುಮೌಲ್ಯಮಾಪನ ಕೇಂದ್ರದ ಮರುಮೌಲ್ಯಮಾಪಕರು ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಸುತ್ತೋಲೆ ಸಂ: :ಬಿಟಿಇ/01/ಇಸಿಎಸ್(2)/2019-20 ದಿನಾಂಕ: 09-07-2019

2. ಸರ್ಕಾರಿ ಆದೇಶ ಸಂ:ಇಡಿ/57/ಟಿಪಿಇ/2013 ಬೆಂಗಳೂರು ದಿ: 17-04-2015

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಎಂ.ಇ.ಐ.ಪಾಲಿಟೆಕ್ನಿಕ್, ರಾಜಾಜಿನಗರ, ಬೆಂಗಳೂರು ಮರುಮೌಲ್ಯಮಾಪನ ಕೇಂದ್ರದಲ್ಲಿ ಮರುಮೌಲ್ಯಮಾಪಕರು ತಮ್ಮ ಕರ್ತವ್ಯವನ್ನು ನಿರ್ವಹಿಸುವಾಗ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಡುವಂತೆ ಸೂಚಿಸಲಾಗಿದೆ.

1. ಮರುಮೌಲ್ಯಮಾಪಕರು ಮೌಲ್ಯಮಾಪನ ಕೇಂದ್ರದಲ್ಲಿ ಬೆಳಗ್ಗೆ 9.30 ಗಂಟೆಗೆ ಹಾಜರಾಗಕ್ಕದ್ದು ಮತ್ತು ತಮ್ಮ ವಿಭಾಗದ ಹಾಜರಾತಿ ಪುಸ್ತಕದಲ್ಲಿ ಕಡ್ಡಾಯವಾಗಿ ಸಹಿ ಮಾಡಿ ಸಂಜೆ 5.00 ಗಂಟೆವರೆಗೆ ಕೇಂದ್ರದಲ್ಲಿ ಹಾಜರಿದ್ದು ತಮ್ಮ ಇನ್ನಿಬ್ಬರು ಸಮಿತಿಯ ಸದಸ್ಯರೊಡನೆ ಸಕ್ರಿಯವಾಗಿ ಕೆಲಸ ನಿರ್ವಹಿಸತಕ್ಕದ್ದು.

2. ಸಂಬಂಧಿಸಿದ ವಿಭಾಗದ ಛೇರ್ಮನ್/ಮೇಲ್ವಿಚಾರಕರಿಂದ ಮರುಮೌಲ್ಯಮಾಪನ ಮಾಡಬೇಕಾದ ಉತ್ತರಪತ್ರಿಕಗಳ ಪ್ಯಾಕೆಟ್‌ಗಳನ್ನು ಪಡೆದು ಪರಿಶೀಲಿಸಿ ನಂತರ Issue Register ನಲ್ಲಿ ಸಹಿ ಮಾಡತಕ್ಕದ್ದು.

3.ಈ ಬಾರಿ ಮರುಮೌಲ್ಯಮಾಪನ ಕಾರ್ಯದಲ್ಲಿ ಈ ಕೆಳಕಂಡ ಬದಲಾವಣೆಗಳನ್ನು ತರಲಾಗಿದೆ.

a. ಸದರಿ ಮರುಮೌಲ್ಯಮಾಪನ ಕಾರ್ಯದಲ್ಲಿ ಕೋಡೆಡ್ ಉತ್ತರ ಪತ್ರಿಕೆಗೆ ಪ್ರತ್ಯೇಕವಾಗಿ Revaluation Details ನಮೂನೆ ನೀಡುವುದನ್ನು ನಿಲ್ಲಿಸಲಾಗಿದೆ.

b. ಪ್ರತಿಯೊಂದು ಮರುಮೌಲ್ಯಮಾಪನ ಲಕೋಟೆಯಲ್ಲಿ R.V form-I ನಮೂನೆಯನ್ನು ಚಾಲ್ತಿಗೆ ತಂದಿದ್ದು ಸದರಿ ನಮೂನೆಯಲ್ಲಿ 10 coded ಉತ್ತರಪತ್ರಿಕೆಗಳ ಮರುಮೌಲ್ಯಮಾಪನ ಅಂಕಗಳನ್ನು ನಮೂದಿಸಲು ಅವಕಾಶ ಕಲ್ಪಿಸಲಾಗಿದೆ.

c. ಪ್ರತಿಯೊಂದು ಮರುಮೌಲ್ಯಮಾಪನ ಲಕೋಟೆಯಲ್ಲಿ R.V form-I ರ 3 ಪ್ರತಿಗಳನ್ನು ಇಡಲಾಗಿರುತ್ತದೆ.

d. ಮರುಮೌಲ್ಯಮಾಪನ ಸಮಿತಿಯಿಂದ 3 ಮರುಮೌಲ್ಯಮಾಪಕರು ಜೊತೆಯಲ್ಲಿ ಕುಳಿತು ಪ್ರತಿಯೊಂದು ಉತ್ತರಪತ್ರಿಕೆಗಳನ್ನು ಮರುಮೌಲ್ಯಮಾಪನ ಮಾಡಿ ಪ್ರತ್ಯೇಕವಾಗಿ R.V form-I ರಲ್ಲಿ ಅಂಕಗಳನ್ನು ನಮೂದಿಸತಕ್ಕದ್ದು.

e. R.V form-I ರಲ್ಲಿ ನಮೂದಿಸಿರುವ ಮರುಮೌಲ್ಯಮಾಪನ ಅಂಕಗಳನ್ನು ಪ್ರತಿಯೊಬ್ಬ ಮರುಮೌಲ್ಯಮಾಪಕರು R.V form-II ಕ್ಕೆ ವರ್ಗಾಯಿಸಿ ಮರುಮೌಲ್ಯಮಾಪನ ಅಂಕಗಳ ಸರಾಸರಿ ಅಂಕಗಳನ್ನು ಮರುಮೌಲ್ಯಮಾಪನದ ಅಂತಿಮ ಅಂಕಗಳೆಂದು ಪರಿಗಣಿಸಿ ಅಂಕಪಟ್ಟಿಗೆ (ಮಾರ್ಕ್ಸ್‌ಲಿಸ್ಟ್) ವರ್ಗಾಯಿಸುವುದು.

f. ಮರುಮೌಲ್ಯಮಾಪಕರು ಮಾರ್ಕ್ಸ್‌ಲಿಸ್ಟ್‌ಗೆ ಅಂಕಗಳನ್ನು ವರ್ಗಾಯಿಸುವ ಮುನ್ನ ಉತ್ತರ ಪತ್ರಿಕೆಗಳ ಲಕೋಟೆಯಲ್ಲಿ ಇಡಲಾಗಿರುವ R.V form-I, R.V form-II ನಮೂನೆಗಳಲ್ಲಿ, ಪ್ರಶ್ನೆವಾರು ಹಾಗೂ coded ಸಂಖ್ಯೆಗಳನುಸಾರ ಅಂಕಗಳನ್ನು ನಮೂದಿಸಿ ಪರಿಶೀಲಿಸಿ ವರ್ಗಾಯಿಸಿರುವ ಬಗ್ಗೆ ಮರುಮೌಲ್ಯಮಾಪಕರು ಖಾತರಿಪಡಿಸಿಕೊಳ್ಳತಕ್ಕದ್ದು.

4. ಭರ್ತಿ ಮಾಡಿದ R.V form-I, R.V form-II ನಮೂನೆಗಳನ್ನು ಮರುಮೌಲ್ಯಮಾಪನ ಮಾಡಿದ ಉತ್ತರಪತ್ರಿಕೆಗಳ ಲಕೋಟೆಯಲ್ಲಿಯೇ ಇಡತಕ್ಕದ್ದು, ಅಂಕಪಟ್ಟಿಗಳನ್ನು(ಮಾರ್ಕ್ಸ್‌ಲಿಸ್ಟ್) ಮಾತ್ರ ಶಿಬಿರದಲ್ಲಿ ಸಂಬಂಧಪಟ್ಟ ವಿಭಾಗದ ಉತ್ತರಪತ್ರಿಕೆಗಳ ಭದ್ರತಾ ಕೊಠಡಿಯ ಅಧಿಕಾರಿಗೆ ನೀಡುವುದು.

5. ಮರುಮೌಲ್ಯಮಾಪಕರು (3 ಜನರ ಸಮಿತಿ) ಪ್ರತಿ ದಿನ ಕನಿಷ್ಠ 30 ಉತ್ತರ ಪತ್ರಿಕೆಗಳನ್ನು ಸಂಪೂರ್ಣವಾಗಿ ಮರುಮೌಲ್ಯಮಾಪನ ಮಾಡಬೇಕು. ದಿನದ ಅಂತ್ಯದೊಳಗೆ ಅಪೂರ್ಣವಾದ ಪ್ಯಾಕೆಟ್‌ಗಳನ್ನು ಇಡದಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

6.ಶೂನ್ಯ ಅಂಕಗಳನ್ನು ದಾಖಲಿಸುವಾಗ ಅಕ್ಷರಗಳಲ್ಲಿಯೇ ಅಂಕಗಳನ್ನು ನಮೂದಿಸಲು (ಉದಾ: Zero Zero) ಸೂಚಿಸಲಾಗಿದೆ.

7. ಮರುಮೌಲ್ಯಮಾಪನ ನಮೂನೆಗಳನ್ನು ಯಾವುದೇ ರೀತಿಯ ತಪ್ಪುಗಳು ಇಲ್ಲದಂತೆ ಸಂಪೂರ್ಣವಾಗಿ ಭರ್ತಿ ಮಾಡಿ ಖಾಲಿ ಇದ್ದ ಕಡೆ ಅಡ್ಡಗೆರೆ ಹಾಕುವುದು ಮತ್ತು ಮೂರು ಜನ ಮರುಮೌಲ್ಯಮಾಪಕರು ಪೂರ್ಣಸಹಿ ಮಾಡಿ ತಮ್ಮತಮ್ಮ ಕೋಡ್(Staff Id) & ವಿಳಾಸ ಬರೆಯಲು ಸೂಚಿಸಲಾಗಿದೆ.

8. ಮಾರ್ಕ್‌ಲಿಸ್ಟ್‌ಗಳಲ್ಲಿ ಮತ್ತು ಮರುಮೌಲ್ಯಮಾಪನ ನಮೂನೆಗಳಲ್ಲಿ ಅಂಕಗಳನ್ನು ಸ್ಫುಟವಾಗಿ ಹಾಗೂ ಸ್ಪಷ್ಟವಾಗಿ ಬರೆಯುವುದು. ಯಾವುದೇ ಕಾರಣಕ್ಕೂ ಅಂಕಗಳನ್ನು ತಿದ್ದಬಾರದಾಗಿ ಸೂಚಿಸಿದೆ.

9. ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರು ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಪಾಲಿಸುವುದು.

ಈ ಮೇಲಿನ ಎಲ್ಲಾ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿ ಲೋಪದೋಷಗಳಿಗೆ ಅವಕಾಶವಿಲ್ಲದಂತೆ ಸಮರ್ಪಕವಾಗಿ ಮರುಮೌಲ್ಯಮಾಪನ ಕಾರ್ಯ ಮಾಡುವಂತೆ ಸೂಚಿಸುತ್ತಾ, ಒಂದು ವೇಳೆ ಲೋಪದೋಷಗಳನ್ನು ಎಸಗಿದಲ್ಲಿ/ಸೂಚನೆಗಳನ್ನು ಪಾಲಿಸದಿದ್ದಲ್ಲಿ ಮರುಮೌಲ್ಯಮಾಪಕರ ವಿರುದ್ಧ ತಾಂತ್ರಿಕ ಪರೀಕ್ಷಾ ಮಂಡಳಿಯ ನಿಯಮಗಳು, ಸರ್ಕಾರಿ ಆದೇಶ ಮತ್ತು ಶಿಕ್ಷಣ ಕಾಯ್ದೆ ನಿಯಮ 28ರ ಅಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ.

ಕಾರ್ಯದರ್ಶಿ 11/07/19

ಇವರಿಗೆ,

ಬೆಂಗಳೂರು ಮರುಮೌಲ್ಯಮಾಪನ ಕೇಂದ್ರದ ಮರುಮೌಲ್ಯಮಾಪಕರು-ಮಾಹಿತಿಗಾಗಿ- ಶಿಬಿರದಮೇಲ್ವಿಚಾರಕರಿಂದ ಪರಿಚಲನೆ ಮೂಲಕ

ಪ್ರತಿ:

1. ಇ- ಆಡಳಿತ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
2. ಗಣಕ ಕೇಂದ್ರ – ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು

ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/01/ಇಸಿಎಸ್(2)/2019-20

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು -01
ದಿನಾಂಕ: 11-07-2019

**ಜ್ಞಾಪನ**

ವಿಷಯ: ಬೆಂಗಳೂರು ಮರು ಮೌಲ್ಯಮಾಪನ ಕೇಂದ್ರದಲ್ಲಿ 2019 ರ ಏಪ್ರಿಲ್/ಮೇ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗಳ ಮೌಲ್ಯಮಾಪನವಾದ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನಕ್ಕೆ ಸಂಬಂಧಿಸಿದ ಅಧಿಕಾರಿಗಳು ನಿರ್ವಹಿಸಬೇಕಾದ ಜವಾಬ್ದಾರಿಗಳ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಸುತ್ತೋಲೆ ಸಂ:ಬಿಟಿಇ/01/ಇಸಿಎಸ್(2)/2019-20 ದಿನಾಂಕ: 09-07-2019
2. ಸರ್ಕಾರಿ ಆದೇಶ ಸಂ:ಇಡಿ/57/ಟಿಪಿಇ/2013 ಬೆಂಗಳೂರು ದಿ: 17-04-2015

*************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2019 ರ ಏಪ್ರಿಲ್/ಮೇ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಯ ಮೌಲ್ಯಮಾಪನವಾದ ಉತ್ತರಪತ್ರಿಕೆಗಳ ಮರುಮೌಲ್ಯಮಾಪನ ಕಾರ್ಯಕ್ಕೆ ಎಂ.ಇ.ಐ.ಪಾಲಿಟೆಕ್ನಿಕ್, ರಾಜಾಜಿನಗರ, ಬೆಂಗಳೂರು ಮರುಮೌಲ್ಯಮಾಪನ ಕೇಂದ್ರಕ್ಕೆ ನಿಯೋಜಿಸಲಾದ ಅಧಿಕಾರಿಗಳ ಕರ್ತವ್ಯ/ಜವಾಬ್ದಾರಿಗಳ ಪಟ್ಟಿಯನ್ನು ಈ ಕೆಳಕಂಡಂತೆ ನೀಡಲಾಗಿದೆ.

**I. ಶಿಬಿರಾಧಿಕಾರಿಗಳು ನಿರ್ವಹಿಸಬೇಕಾದ ಕರ್ತವ್ಯಗಳು:**

1. ಮರುಮೌಲ್ಯಮಾಪನ ಶಿಬಿರ ನಡೆಸಲು ಬೇಕಾದ ತರಗತಿ ಕೊಠಡಿಗಳ ಮತ್ತು ಪಿಠೋಪಕರಣಗಳ ವ್ಯವಸ್ಥೆ ಮಾಡುವುದು ಹಾಗೂ ಮರುಮೌಲ್ಯಮಾಪನ ಸಮಯದಲ್ಲಿ ಮೂಲಭೂತ ಸೌಕರ್ಯಗಳಾದ, ನೀರು, ವಿದ್ಯುತ್ ಹಾಗೂ ಮೌಲ್ಯಮಾಪನ ಕಾರ್ಯಕ್ಕೆ ತಮ್ಮ ಸಂಸ್ಥೆಯ ಇಬ್ಬರು 'ಡಿ' ಗ್ರೂಪ್ ನೌಕರರನ್ನು ನಿಯೋಜಿಸುವುದು.

2. ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ ಇವರಿಂದ ಮರುಮೌಲ್ಯಮಾಪನಕ್ಕಾಗಿ ನಿಮ್ಮ ಸಂಸ್ಥೆಯಲ್ಲಿ ಇಡಲಾಗಿರುವ ಉತ್ತರಪತ್ರಿಕೆಗಳನ್ನು ಬೆಂಕಿ ಮತ್ತು ನೀರಿನ ಸಾಮೀಪ್ಯದಿಂದಾಗಿ ಅಥವಾ ಯಾವುದೇ ಸಂಭವನೀಯ ಪ್ರಕೃತಿ ವಿಕೋಪಗಳಿಂದಾಗಲಿ ಅಥವಾ ಕಿಡಿಗೇಡಿಗಳ ಕೈವಾಡದಿಂದಾಗಲಿ ಹಾನಿಯಾಗದಂತೆ ಗರಿಷ್ಠ ಮಟ್ಟದ ಸುರಕ್ಷತೆಯುಳ್ಳ ಕೊಠಡಿಯಲ್ಲಿ ಭದ್ರವಾಗಿ ಇಡಲು ಸಾಧ್ಯವಾದ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು ಹಾಗೂ ಪೋಲೀಸ್ ರಕ್ಷಣೆ ಪಡೆಯುವುದು.

3. ಮರುಮೌಲ್ಯಮಾಪನ ಕೇಂದ್ರದಲ್ಲಿ ಮರುಮೌಲ್ಯಮಾಪನವಾದ ಉತ್ತರ ಪತ್ರಿಕೆಗಳ ಅಂಕಗಳನ್ನು ಸಂಬಂಧಪಟ್ಟ ಮಾರ್ಕ್ಸ್‌ಲಿಸ್ಟ್‌ಗಳಿಂದ ಮೊದಲನೇ ಕೀಯಿಂಗ್ ಮಾಡಿಸಲು ಗಣಕಕೇಂದ್ರದಲ್ಲಿ ಸೂಕ್ತ ವ್ಯವಸ್ಥೆ ಮಾಡುವುದು ಮತ್ತು ಗಣಕ ವಿಭಾಗದ ಉಪನ್ಯಾಸಕರನ್ನು ನೇಮಿಸಿ ಅವರಿಗೆ ಸೂಕ್ತ ಸಿಬ್ಬಂದಿಯನ್ನು ಒದಗಿಸಿಕೊಟ್ಟು ಮೊದಲನೇ ಕೀಯಿಂಗ್ ಕಾರ್ಯವನ್ನು ಸುಸೂತ್ರವಾಗಿ ನಡೆಸಿ ಗೌಪ್ಯತೆ ಮತ್ತು ಪಾವಿತ್ರ್ಯತೆಯನ್ನು ಕಾಪಾಡುವುದು.

4. ನೋಡಲ್/ಸಹಾಯಕ ನೋಡಲ್ ಅಧಿಕಾರಿಯವರ ಜೊತೆ ಮತ್ತು ಮೇಲ್ವಿಚಾರಕರ ಜೊತೆ ಸಮನ್ವಯತೆಯಿಂದ ಕಾರ್ಯ ನಿರ್ವಹಿಸುವುದು ಮತ್ತು ಮೌಲ್ಯಮಾಪನದ ಪ್ರಗತಿ ಬಗ್ಗೆ ಪ್ರತಿದಿನ ಕಾರ್ಯದರ್ಶಿಗಳು, ತಾಂ.ಪ.ಮಂ. ಬೆಂಗಳೂರು ಇವರಿಗೆ ಮಾಹಿತಿ ನೀಡುವುದು.

**II. ಮರುಮೌಲ್ಯಮಾಪನ ಶಿಬಿರದ ಮೇಲ್ವಿಚಾರಕರು/ಪರೀಕ್ಷಕರ ಸಮಿತಿ ಸದಸ್ಯರು/ಅಧ್ಯಕ್ಷರುನಿರ್ವಹಿಸಬೇಕಾದ ಕರ್ತವ್ಯಗಳು:**

1. ಮರುಮೌಲ್ಯಮಾಪನ ಕೇಂದ್ರದಲ್ಲಿ ಸಮಿತಿವಾರು ಹಾಜರಾತಿ ಪುಸ್ತಕವನ್ನು ಇಡತಕ್ಕದ್ದು. ಹಾಜರಾತಿ ಪುಸ್ತಕದಲ್ಲಿ ಮರುಮೌಲ್ಯಮಾಪಕರ ಹೆಸರಿನ ಮುಂದಿರುವ Staff ID ಅನ್ನು ತಿಳಿಸುವುದು ಹಾಗೂ ಮಾರ್ಕ್ಸ್‌ಲಿಸ್ಟ್‌ನಲ್ಲಿ ಮರುಮೌಲ್ಯಮಾಪಕರು Staff ID ಬರೆಯುವುದು ಕಡ್ಡಾಯವೆಂದು ತಿಳಿಸುವುದು.

2. ಈ ಬಾರಿಯ ಮರುಮೌಲ್ಯಮಾಪನ ಕಾರ್ಯದಲ್ಲಿ ಈ ಕೆಳಕಂಡ ಬದಲಾವಣೆಗಳನ್ನು ತರಲಾಗಿದೆ.

   a. ಸದರಿ ಮರುಮೌಲ್ಯಮಾಪನ ಕಾರ್ಯದಲ್ಲಿ ಕೋಡೆಡ್ ಉತ್ತರ ಪತ್ರಿಕೆಗೆ ಪ್ರತ್ಯೇಕವಾಗಿ Revaluation Details ನಮೂನೆ ನೀಡುವುದನ್ನು ನಿಲ್ಲಿಸಲಾಗಿದೆ.

   b. ಪ್ರತಿಯೊಂದು ಮೌಲ್ಯಮಾಪನವಾದ ಲಕೋಟೆಯಲ್ಲಿ R V form-I ನಮೂನೆಯನ್ನು ಚಾಲ್ತಿಗೆ ತಂದಿದ್ದು ಸದರಿ ನಮೂನೆಯಲ್ಲಿ 10Coded ಉತ್ತರಪತ್ರಿಕೆಗಳ ಮರುಮೌಲ್ಯಮಾಪನ ಅಂಕಗಳನ್ನು ನಮೂದಿಸಲು ಅವಕಾಶ ಕಲ್ಪಿಸಲಾಗಿದೆ.

   c. ಪ್ರತಿಯೊಂದು ಮರುಮೌಲ್ಯಮಾಪನ ಲಕೋಟೆಯಲ್ಲಿ R V form-I ರ 3 ಪ್ರತಿಗಳನ್ನು ಇಡಲಾಗಿರುತ್ತದೆ.

   d. ಮರುಮೌಲ್ಯಮಾಪನ ಸಮಿತಿಯ ಮೂವರು ಮರುಮೌಲ್ಯಮಾಪಕರು ಜೊತೆಯಲ್ಲಿಯೇ ಕುಳಿತು ಉತ್ತರಪತ್ರಿಕೆಗಳನ್ನು ಮರುಮೌಲ್ಯಮಾಪನ ಮಾಡಿ ಪ್ರತ್ಯೇಕವಾಗಿ R V form-I ರಲ್ಲಿ ಅಂಕಗಳನ್ನು ನಮೂದಿಸಿರತಕ್ಕದ್ದು.

   e. RV form-I ರಲಿ ನಮೂದಿಸಿರುವ ಮರುಮೌಲ್ಯಮಾಪನದ ಅಂಕಗಳನ್ನು ಪ್ರತಿಯೊಬ್ಬ ಮರುಮೌಲ್ಯಮಾಪಕರು ಮರುಮೌಲ್ಯಮಾಪನ ಅಂಕಗಳ ಸರಾಸರಿ ಅಂಕಗಳನ್ನು ಮರು ಮೌಲ್ಯಮಾಪನದ RVform-II ಕ್ಕೆ ವರ್ಗಾಯಿಸಿ, ಅಂತಿಮ ಅಂಕಗಳೆಂದು ಪರಿಗಣಿಸಿ ಅಂಕಪಟ್ಟಿಗೆ (ML) ವರ್ಗಾಯಿಸುವುದು.

3. ಸಮರ್ಪಕವಾಗಿ ಮರುಮೌಲ್ಯಮಾಪನ ಮಾಡುವಂತೆ ಮರುಮೌಲ್ಯಮಾಪಕರಿಗೆ ಆಗಿಂದ್ದಾಗ್ಗೆ ಎಲ್ಲಾ ಕೊಠಡಿಗಳಿಗೆ ಭೇಟಿ ನೀಡಿ ಅಗತ್ಯ ಮಾರ್ಗದರ್ಶನ ನೀಡಿ ಮರುಮೌಲ್ಯಮಾಪನ ಕಾರ್ಯವು ಸಮರ್ಪಕವಾಗಿ ನಡೆಯುತ್ತಿರುವುದನ್ನು ಖಾತರಿಪಡಿಸಿಕೊಳ್ಳುವುದು.

4. ಮರುಮೌಲ್ಯಮಾಪಕರು ಅಸಮರ್ಪಕವಾಗಿ ಮರುಮೌಲ್ಯಮಾಪನ ಮಾಡುವುದು ಸ್ಥಿರವಾಗಿ ಮುಂದುವರೆದರೆ (Consistantly erratic valuation) ಮಂಡಳಿಯ ಅಧಿಕಾರಿಗಳಿಗೆ ಸೂಕ್ತ ಶಿಸ್ತು ಕ್ರಮಕ್ಕಾಗಿ ಶಿಫಾರಸ್ಸು ಮಾಡುವುದು.

5. ಸಮಯಪಾಲನೆ ಮಾಡದ, ಅಶಿಸ್ತು ಮತ್ತು ಸಮರ್ಪಕ ಮರುಮೌಲ್ಯಮಾಪನ ಮಾಡದ, ಪ್ರತಿದಿನ 30 ಥಿಯರಿ ಉತ್ತರ ಪತ್ರಿಕೆಗಳ ದರದಲ್ಲಿ ಮರುಮೌಲ್ಯಮಾಪನ ಮಾಡದ, ಮಾರ್ಕ್ಸ್‌ಲಿಸ್ಟ್‌ನಲ್ಲಿ Staff ID ಬರೆಯಲು ನಿರ್ಲಕ್ಷ್ಯವಹಿಸಿದವರ ಪಟ್ಟಿಯನ್ನು ಅಧಿಕಾರಿಗಳ ಮುಖಾಂತರ ಕಾರ್ಯದರ್ಶಿ ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ಸಲ್ಲಿಸುವುದು.

6. ಸಂಬಂಧಪಟ್ಟ ಪ್ರಿನ್ಸಿಪಾಲರ/ಶಿಬಿರಾಧಿಕಾರಿಗಳ ಸಹಕಾರದೊಂದಿಗೆ ಮರುಮೌಲ್ಯಮಾಪಕರಿಗೆ ಮರುಮೌಲ್ಯಮಾಪನ ಮಾಡಲು ಸೂಕ್ತ ಆಸನ ವ್ಯವಸ್ಥೆ ಮಾಡುವುದು. ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ಮರುಮೌಲ್ಯಮಾಪಕರ ಯಾವುದೇ ಸಮಸ್ಯೆಗಳಿದ್ದಲ್ಲಿ ಬಗೆಹರಿಸಲು ಕ್ರಮ ಕೈಗೊಳ್ಳುವುದು.

7. ಮರುಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಲಾದ ಎಲ್ಲಾ ಮರುಮೌಲ್ಯಮಾಪಕರು ಕಾರ್ಯವರದಿ ಮಾಡಿಕೊಂಡಿರುವ ಬಗ್ಗೆ ಪರಿಶೀಲಿಸತಕ್ಕದ್ದು. ಮರುಮೌಲ್ಯಮಾಪಕರು ಮರುಮೌಲ್ಯಮಾಪನಕ್ಕೆ ನಿಗದಿತ ಸಮಯದಲ್ಲಿ ಹಾಜರಾಗುತ್ತಿರುವ ಬಗ್ಗೆ ಪರಿಶೀಲಿಸುವುದು. ಮರುಮೌಲ್ಯಮಾಪನ ಕೊಠಡಿಗಳಲ್ಲಿ ಮರುಮೌಲ್ಯಮಾಪಕರ ಹೊರತು ಬೇರೆ ಯಾರು ಇರದಂತೆ ಕ್ರಮ ಕೈಗೊಳ್ಳುವುದು. ಮರುಮೌಲ್ಯಮಾಪಕರು ಮಾರ್ಕ್ಸ್‌ಲಿಸ್ಟ್‌ಗೆ ಅಂಕಗಳನ್ನು ವರ್ಗಾಯಿಸುವ ಮುನ್ನ ಉತ್ತರ ಪತ್ರಿಕೆಗಳ coded ಸಂಖ್ಯೆಗಳನುಸಾರ ಅಂಕಗಳನ್ನು ನಮೂದಿಸಿ ಪರಿಶೀಲಿಸಿ ಅಂಕಪಟ್ಟಿಗಳಿಗೆ ವರ್ಗಾಯಿಸುವ ಬಗ್ಗೆ ಮರುಮೌಲ್ಯಮಾಪಕರು ಖಾತರಿಪಡಿಸಿಕೊಳ್ಳುವದು. Revaluation Marks Statement ನಮೂನೆಗಳಲ್ಲಿ ಭರ್ತಿ ಮಾಡಿರುವ ನಮೂನೆಯನ್ನು Value ಮಾಡಿರುವ ಉತ್ತರಪತ್ರಿಕೆಗಳ ಲಕೋಟೆಯಲ್ಲಿ ಇಡತಕ್ಕದ್ದು. ಅಂಕಪಟ್ಟಿಗಳನ್ನು (ML) ಗಳನ್ನು ಮಾತ್ರ ಶಿಬಿರದಲ್ಲಿ ಸಂಬಂದಪಟ್ಟ ವಿಭಾಗದ ಉತ್ತರ ಪತ್ರಿಕೆಗಳ ಭದ್ರತಾ ಕೊಠಡಿಯ ಅಧಿಕಾರಿಗೆ ನೀಡುವುದು.

8. Valuer's Certificate ಮತ್ತು Attendance Certificate ನೀಡುವ ಸಂದರ್ಭದಲ್ಲಿ ಪ್ರತಿ ಮರುಮೌಲ್ಯಮಾಪಕರಿಂದ ಮೌಲ್ಯಮಾಪನವಾದ ಉತ್ತರ ಪತ್ರಿಕೆಗಳ ಸಂಖ್ಯೆ ಮತ್ತು ವಾಪಸ್ಸು ನೀಡಿರುವ ಮಾರ್ಕ್ಸ್‌ಲಿಸ್ಟ್ (ML) ಗಳ ಸಂಖ್ಯೆ ಅದರಲ್ಲಿನ ಒಟ್ಟು ಕ್ಯಾಂಡಿಡೇಟ್‌ಗಳ ಸಂಖ್ಯೆಯನ್ನು ತಾಳೆ ಮಾಡುವುದು ನಂತರ ಕಿರುಸಹಿ ಮಾಡುವುದು.

9. ಮರುಮೌಲ್ಯಮಾಪನದ ಪ್ರಗತಿ ಬಗ್ಗೆ ಪ್ರತಿದಿನ ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು, ಇವರಿಗೆ ಮಾಹಿತಿ ನೀಡುವುದು ಮತ್ತು ಮೌಲ್ಯಮಾಪನವಾದ ಉತ್ತರ ಪತ್ರಿಕಗಳು, ಹಾಜರಾದ ಮರುಮೌಲ್ಯಮಾಪಕರು, ಗೈರು ಹಾಜರಾದ ಮರುಮೌಲ್ಯಮಾಪಕರು ಇನ್ನಿತರ ಎಲ್ಲಾ ಮಾಹಿತಿ ಅಂಕಿಅಂಶಗಳನ್ನು ಬೋರ್ಡ್‌ವಾರು ಕಾರ್ಯದರ್ಶಿಯವರಿಗೆ ಮರುಮೌಲ್ಯಮಾಪನದ ಕೊನೆಯಲ್ಲಿ ಸಲ್ಲಿಸುವುದು.

10. ಮರುಮೌಲ್ಯಮಾಪನ ಮುಕ್ತಾಯವಾಗುವವರೆಗೂ ಮರುಮೌಲ್ಯಮಾಪನ ಕೇಂದ್ರದಲ್ಲಿಯೇ ಹಾಜರಿದ್ದು ಮರುಮೌಲ್ಯಮಾಪನದ ಪಾವಿತ್ರ್ಯತೆ ಹಾಗೂ ಗೌಪ್ಯತೆ ಕಾಪಾಡುವ ಬಗ್ಗೆ ಮಂಡಳಿಯ ಅಧಿಕಾರಿಯವರ ಜೊತೆ ಸಮನ್ವಯತೆಯಿಂದ ಕಾರ್ಯ ನಿರ್ವಹಿಸುವುದು.

11. ಮರು ಮೌಲ್ಯಮಾಪಕರು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಪಾಲಿಸಲು ಅನುವಾಗುವಂತೆ ಸುತ್ತೋಲಿಸುವುದು ಮತ್ತು ನಿಗಾ ಇಡುವುದು.

12. ಕಾಲಕಾಲಕ್ಕೆ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ/ಕಾರ್ಯದರ್ಶಿ, ತಾಂ.ಪ.ಮಂಡಳಿ ಇವರು ನೀಡುವ ನಿರ್ದೇಶನಗಳನ್ನು ಪಾಲಿಸುವುದು.

11/07/19

ಕಾರ್ಯದರ್ಶಿ

ಇವರಿಗೆ:

ಮರುಮೌಲ್ಯಮಾಪನ ಕೇಂದ್ರದ ಶಿಬಿರಾಧಿಕಾರಿಗಳು/ ಮೇಲ್ವಿಚಾರಕರು /ಪರೀಕ್ಷಕರ ಸಮಿತಿಗಳ ಅಧ್ಯಕ್ಷರು /ಸದಸ್ಯರು ಸಂಬಂಧಪಟ್ಟ ಅಧಿಕಾರಿ/ ಸಿಬ್ಬಂದಿ ವರ್ಗದವರಿಗೆ.

**ಪ್ರತಿ:**

1. ಇ– ಆಡಳಿತ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
2. ಗಣಕ ಕೇಂದ್ರ, ತಾಂ.ಪ.ಮಂ.
3. ಇಎಪಿ ವಿಭಾಗ